## OCTOBER 18,2024
## ALL INDIA RADIO- DHARWAD
## PRADESH SAMACHARA (KANNADA) 7:05 AM

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ವಿವೇಕಾದಿತ್ಯ ಕನಿಯಾಲ**

<><><>

**ಮುಖ್ಯಾಂಶಗಳು:**

- ರಾಜ್ಯದ ಮೂರು ವಿಧಾನಸಭಾ ಕ್ಷೇತ್ರಗಳಿಗೆ ಉಪ ಚುನಾವಣೆ; ವಿವಿಧ ಪಕ್ಷಗಳಿಂದ ಸೂಕ್ತ ಅಭ್ಯರ್ಥಿ ಆಯ್ಕೆಗೆ, ಚಿಂತನ–ಮಂಥನ.
- ರಾಯಚೂರು ವಿಶ್ವವಿದ್ಯಾಲಯ ಹಾಗೂ ಪರಿಶಿಷ್ಟ ವರ್ಗದ ವಸತಿ ಶಾಲೆಗಳಿಗೆ ಮಹರ್ಷಿ ವಾಲ್ಮೀಕಿ ನಾಮಾಂಕಿತ – ಮುಖ್ಯಮಂತ್ರಿ ಸಿದ್ದರಾಮಯ್ಯ.
- ಅಂಗಾಂಗ ದಾನದ ಬಗ್ಗೆ ಪ್ರತಿಜ್ಞೆ ಹಾಗೂ ಜನ ಜಾಗೃತಿ ಮೂಡಲಿ – ದಿನೇಶ ಗುಂಡೂರಾವ್, ಆಶಯ.
- ಶೀಗಿ ಹುಣ್ಣಿಮೆ; ಭೂಮಿ ತಾಯಿಗೆ ಸೀಮಂತ ನೆರವೇರಿಸಿದ, ರೈತಾಪಿ ವರ್ಗ.

<><><>

**ಈಗ ವಾರ್ತೆಗಳ ವಿವರ**

<><><>

ಹಾವೇರಿ ಜಿಲ್ಲೆ ಶಿಗ್ಗಾಂವಿ–ಸವಣೂರು, ಬಳ್ಳಾರಿ ಹಾಗೂ ಸಂಡೂರು ಮತ್ತು ರಾಮನಗರ ಜಿಲ್ಲೆ, ಚನ್ನಪಟ್ಟಣ ವಿಧಾನಸಭಾ ಕ್ಷೇತ್ರಗಳಿಗೆ ಉಪ ಚುನಾವಣೆ ಘೋಷಣೆಯಾಗಿದ್ದು, ಇಂದು ಅಧಿಸೂಚನೆ ಹೊರಡಲಿದೆ. ಮಾದರಿ ನೀತಿ ಸಂಹಿತೆ ಇಂದೇ ಜಾರಿಗೆ ಬರಲಿದೆ. ಅಭ್ಯರ್ಥಿಗಳ ನಾಮಪತ್ರ ಸಲ್ಲಿಕೆಗೆ ಬರುವ 25ನೇ ತಾರೀಖು ಕೊನೆಯ ದಿನ. 28ರಂದು ನಾಮಪತ್ರಗಳ ಪರಿಶೀಲನೆ ಹಾಗೂ 30 ನೇ ತಾರೀಖು ನಾಮಪತ್ರ ಹಿಂಪಡೆಯಲು, ಕೊನೆ ದಿನವಾಗಿದೆ. ನವೆಂಬರ್ 13 ರಂದು ಮತದಾನ ನಡೆಯಲಿದ್ದು, 23 ರಂದು ಮತ ಎಣಿಕೆ ಜರುಗಲಿದೆ. 25 ರಂದು ಚುನಾವಣಾ ಪ್ರಕ್ರಿಯೆ ಪೂರ್ಣಗೊಳ್ಳಲಿದೆ. ಹಾವೇರಿ ಸಂಸದ ಬಸವರಾಜ ಬೊಮ್ಮಾಯಿ, ಬಳ್ಳಾರಿ ಸಂಸದ ಈ. ತುಕಾರಾಂ ಹಾಗೂ ಮಂಡ್ಯ ಸಂಸದ ಎಚ್.ಡಿ. ಕುಮಾರಸ್ವಾಮಿ ಅವರುಗಳ ಆಯ್ಕೆಯಿಂದ, ತೆರವಾಗಿರುವ ಮೂರು ವಿಧಾನಸಭಾ ಕ್ಷೇತ್ರಗಳಿಗೆ ಉಪ ಚುನಾವಣೆ ನಡೆಯಲಿದೆ. ಹಾವೇರಿ ಜಿಲ್ಲೆಯಲ್ಲಿ, 2 ಲಕ್ಷ 36 ಸಾವಿರದ 7 ನೂರಾ 90 ಜನ ಮತದಾರರು, ಬಳ್ಳಾರಿ ಜಿಲ್ಲೆಯಲ್ಲಿ 2 ಲಕ್ಷ 36 ಸಾವಿರದ ನೂರು ಜನ ಹಾಗೂ ಚನ್ನಪಟ್ಟಣದಲ್ಲಿ 2 ಲಕ್ಷ 32 ಸಾವಿರದ 8 ನೂರಾ 36 ಜನ ಮತದಾರರು ಮತ ಚಲಾಯಿಸಲಿದ್ದಾರೆ.  ಹಾವೇರಿ, ಬಳ್ಳಾರಿ ಹಾಗೂ ರಾಮನಗರದ ಜಿಲ್ಲಾ ಚುನಾವಣಾಧಿಕಾರಿಗಳು, ಉಪ ಚುನಾವಣೆಗೆ ಕೈಗೊಂಡಿರುವ ಪೂರ್ವ ಸಿದ್ಧತೆಗಳನ್ನು ಕೈಗೊಂಡಿದ್ದಾರೆ.

<><><>

ರಾಜ್ಯದಲ್ಲಿ ಮುಂದಿನ ತಿಂಗಳು, ಮೂರು ವಿಧಾನಸಭಾ ಕ್ಷೇತ್ರಗಳಿಗೆ ಘೋಷಣೆಯಾಗಿರುವ, ಉಪ ಚುನಾವಣೆಯನ್ನು ಎದುರಿಸಲು, ಕಾಂಗ್ರೆಸ್ ಪಕ್ಷ ಸಿದ್ಧವಾಗಿದೆ ಎಂದು, ಕಾಂಗ್ರೆಸ್ ಹಿರಿಯ ಮುಖಂಡ ಸಿದ್ದರಾಮಯ್ಯ ಹೇಳಿದ್ದಾರೆ. ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದ ನಾಯಕರ ಅಭಿಪ್ರಾಯ ಪಡೆದ ಬಳಿಕ, ಪಕ್ಷದ ಕೇಂದ್ರ ಚುನಾವಣಾ ಸಮಿತಿ, ಅಭ್ಯರ್ಥಿಗಳ ಆಯ್ಕೆಯನ್ನು ಅಂತಿಮಗೊಳಿಸಲಿದೆ ಎಂದರು.

<><><>

ಹಾವೇರಿ ಸಂಸದ ಹಾಗೂ ಬಿಜೆಪಿ ಮುಖಂಡ, ಬಸವರಾಜ ಬೊಮ್ಮಾಯಿ ಅವರು, ಬೆಂಗಳೂರಿನಲ್ಲಿ ಕೇಂದ್ರ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಅವರನ್ನು ಭೇಟಿ ಮಾಡಿ, ಚರ್ಚಿಸಿದರು. ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಂದಿನ ಎರಡು ದಿನಗಳಲ್ಲಿ, ಮೂರು ಕ್ಷೇತ್ರಗಳ ಬಿಜೆಪಿ ಅಭ್ಯರ್ಥಿಗಳನ್ನು ಅಂತಿಮ ಗೊಳಿಸಲಾಗುವುದು. ಪಕ್ಷದ ಹಿರಿಯ ನಾಯಕರು, ಕೇಂದ್ರದ ವರಿಷ್ಠರೊಂದಿಗೆ ಸಮಾಲೋಚಿಸಿ, ಅಭ್ಯರ್ಥಿಗಳ ಹೆಸರನ್ನು ಪ್ರಕಟಿಸಲಿದ್ದಾರೆ ಎಂದರು.

<><><>

ಕಾಂಗ್ರೆಸ್ ಪಕ್ಷ, ಚುನಾವಣಾ ಮಾದರಿ ನೀತಿ ಸಂಹಿತೆ ಉಲ್ಲಂಘಿಸಿದೆ ಎಂದು ವಿಧಾನಪರಿ ’ತ್ ಸದಸ್ಯ ಸಿ.ಟಿ.ರವಿ ಆರೋಪಿಸಿದ್ದಾರೆ. ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜಾಹಿರಾತು ನೀಡಿ, ಮಾದರಿ ನೀತಿ ಸಂಹಿತೆ ಉಲ್ಲಂಘಿಸಿದ ಮುಖ್ಯಮಂತ್ರಿ ವಿರುದ್ಧ, ಚುನಾವಣಾ ಆಯೋಗ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

<><><>

ರಾಜ್ಯದ ಎಲ್ಲ ಪರಿಶಿ ್ಟ ವರ್ಗದ ವಸತಿ ಶಾಲೆಗಳಿಗೆ ಮತ್ತು ರಾಯಚೂರು ವಿಶ್ವವಿದ್ಯಾಲಯಕ್ಕೆ, ಮಹರ್ಷಿ ವಾಲ್ಮೀಕಿ ಹೆಸರನ್ನು, ನಾಮಾಂಕಿತ ಗೊಳಿಸಲಾಗುವುದು ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಕಟಿಸಿದ್ದಾರೆ. ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ ಹಿನ್ನೆಲೆ, ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮವನ್ನು ಉದ್ಘಾಟಿಸಿ, ಅವರು ಮಾತನಾಡಿದರು. ರಾಮಾಯಣ ಮಹಾಕಾವ್ಯ ಬರೆದ, ಮಹರ್ಷಿ ಶ್ರೀ ವಾಲ್ಮೀಕಿ ಅವರು, ವಿಶ್ವಮಾನವರಾಗಿದ್ದರು. ಅವರು ಸಮಪಾಲು, ಸಮಬಾಳು ಮತ್ತು ಸಮಾನ ಅವಕಾಶಗಳ ಬಗ್ಗೆ ಪ್ರತಿಪಾದಿಸಿದ್ದರು ಎಂದು, ಮುಖ್ಯಮಂತ್ರಿ ನುಡಿದರು. 2024 ನೇ ಸಾಲಿನ ಮಹರ್ಷಿ ಶ್ರೀ ವಾಲ್ಮೀಕಿ ಪ್ರಶಸ್ತಿ ಪುರಸ್ಕೃತರಾದ, ಚಿತ್ರದುರ್ಗ ಜಿಲ್ಲೆ ಚಳ್ಳಕೆರೆಯ ಕಿಲಾರಿ ಜೋಗಯ್ಯ, ತಮ್ಮ ಸಂತಸ ಹಂಚಿಕೊಂಡಿದ್ದಾರೆ.

<><><>

ಚಿತ್ರದುರ್ಗ ಕಿಲಾರಿ ಜೋಗಯ್ಯ ಧ್ವನಿ 17 ಸೆಕೆಂದುಗಳು

<><><>

ಪ್ರಶಸ್ತಿಗೆ ಭಾಜನರಾದ, ಇನ್ನೋವರ್ ಸಾಧಕ, ಬೆಳಗಾವಿಯ ರಾಜಶೇಖರ ತಳವಾರ, ಪ್ರದೇಶ ಸಮಾಚಾರಕ್ಕಾಗಿ ತಮ್ಮ ಅನಿಸಿಕೆ, ವ್ಯಕ್ತ ಪಡಿಸಿದ್ದಾರೆ.

<><><>

ಬೆಳಗಾವಿ ರಾಜಶೇಖರ ತಳವಾರ ಧ್ವನಿ 34 ಸೆಕೆಂದುಗಳು

<><><>

ಮಹರ್ಷಿ ಶ್ರೀ ವಾಲ್ಮೀಕಿ ಪ್ರಶಸ್ತಿ ಪಡೆದ, ಇನ್ನೋರ್ವ ಸಾಧಕಿ, ವಿಜಯನಗರ ಜಿಲ್ಲೆ, ಹರಪನಹಳ್ಳಿಯ ರಂಗಭೂಮಿ ಕಲಾವಿದೆ ರತ್ನಮ್ಮ ಸೋಗಿ, ತಮ್ಮ ಸಂತಸ ಹಂಚಿಕೊಂಡಿದ್ದು ಹೀಗೆ..

<><><>

ರಂಗಭೂಮಿ ಕಲಾವಿದೆ ರತ್ನಮ್ಮ ಸೋಗಿ ಧ್ವನಿ 18 ಸೆಕೆಂದುಗಳು

<><><>

ಬೆಂಗಳೂರು ಕೇಂದ್ರದ ಕೆ.ಎಸ್. ಮೃತ್ಯುಂಜಯ, ಮೈಸೂರಿನ ಸೋಲಿಗರ ಡಾಕ್ಟರ್ ರತ್ನಮ್ಮ ಎಸ್. ಅವರು ಸೇರಿದಂತೆ, ಮುಖ್ಯಮಂತ್ರಿಯವರು, ಒಟ್ಟು ಐವರು ಸಾಧಕರಿಗೆ, ತಲಾ 20 ಗ್ರಾಂ ಬಂಗಾರದ ಪದಕ ಹಾಗೂ 5 ಲಕ್ಷ ರೂಪಾಯಿ ಪುರಸ್ಕಾರ ನೀಡಿ, ಸನ್ಮಾನಿಸಿದರು. ರಾಜನಹಳ್ಳಿ, ಮಹರ್ಷಿ ಶ್ರೀ ವಾಲ್ಮೀಕಿ ಗುರುಪೀಠದ ಶ್ರೀ ಪ್ರಸನ್ನಾನಂದಪುರಿ ಶ್ರೀಗಳು ಸಾನಿಧ್ಯ ವಹಿಸಿದ್ದರು.

<><><>

ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿಯ ಶಾಂತಿನಿಕೇತನ ಪಬ್ಲಿಕ್ ಶಾಲೆಯ ವಿದ್ಯಾರ್ಥಿನಿ ಎಂ.ಮಹೇಶ್ವರಿ, ಹಲಗಲಿಯ ಹುತಾತ್ಮ ಬೇಡರಾದ, ಬಾಲ ಮತ್ತು ಜಡಗಾ ಸಂಸ್ಮರಣೆ, 1 ಲಕ್ಷ ರೂಪಾಯಿ ಪುರಸ್ಕಾರಕ್ಕೆ ಭಾಜನರಾಗಿದ್ದಾರೆ.

ಎಸ್.ಎಸ್.ಎಲ್.ಸಿ ವಾರ್ಷಿಕ ಪರೀಕ್ಷೆಯಲ್ಲಿ, ಅತೀ ಹೆಚ್ಚು ಅಂಕ ಗಳಿಸಿದ, ಪರಿಶಿ ್ಟ ವರ್ಗದ ವಿದ್ಯಾರ್ಥಿಗಳಿಗೆ, ಪ್ರೋತ್ಸಾಹ ಧನವಾಗಿ, ನೀಡಲಾಗುತ್ತಿದೆ. 625ಕ್ಕೆ 620 ಅಂಕಗಳನ್ನು ಗಳಿಸಿ, ಪರಿಶಿ ್ಟ ವರ್ಗಗಳ ವಿದ್ಯಾರ್ಥಿಗಳಲ್ಲಿ, ಜಿಲ್ಲೆಗೆ ಪ್ರಥಮ ಸ್ಥಾನ ಪಡೆದ ಮಹೇಶ್ವರಿ, ನಗದು ಪ್ರೋತ್ಸಾಹ ಧನ ಪಡೆಯಲು ಅರ್ಹರಾಗಿದ್ದಾರೆ ಎಂದು, ಬೆಂಗಳೂರು ಗ್ರಾಮಾಂತರ ಜಿಲ್ಲಾ ಪರಿಶಿ ್ಟ ವರ್ಗಗಳ ಕಲ್ಯಾಣಾಧಿಕಾರಿ ತಿಳಿಸಿದ್ದಾರೆ.

<><><>

ಈಗ ಪ್ರಕಟಣೆ..
ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು

<><><>
<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಗದಗ ನಾಗಾವಿಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ, ಸಬರಮತಿ ಆಶ್ರಮದಲ್ಲಿ, ಮಹರ್ಷಿ ವಾಲ್ಮೀಕಿಯವರ ಭಾವಚಿತ್ರಕ್ಕೆ, ಕುಲಸಚಿವ ಸುರೇಶ ನಾಡಗೌಡರ ಪು ್ಪ ನಮನ ಸಲ್ಲಿಸಿದರು. ಹಾವೇರಿಯಲ್ಲಿ ಜಿಲ್ಲಾ ಪಂಚಾಯ್ತಿ ಸಿ.ಇ.ಓ. ಅಕ್ಷಯ ಶ್ರೀಧರ್, ಮಹರ್ಷಿ ವಾಲ್ಮೀಕಿ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು. ಬೆಳಗಾವಿಯಲ್ಲಿ ಮಹರ್ಷಿ ಶ್ರೀ ವಾಲ್ಮೀಕಿ ಜಯಂತಿಯನ್ನು, ಸಡಗರ ಸಂಭ್ರಮದಿಂದ ಆಚರಿಸಲಾಯಿತು. ಶಾಸಕ ರಾಜು ಸೇಠ, ಜಿಲ್ಲಾಧಿಕಾರಿ ಮೊಹಮ್ಮದ್ ರೋ ್ನ್ ಹಾಗೂ ಗಣ್ಯರು ಗೌರವಾರ್ಪಿಸಿದರು. ಮಹರ್ಷಿ ವಾಲ್ಮೀಕಿ ಅವರು, ರಾಮಾಯಣದಲ್ಲಿ ಪರಿಸರಕ್ಕೆ ಮಹತ್ವ ನೀಡಿದ್ದಾರೆ. ಅರಣ್ಯ ಹಾಗೂ ವನ್ಯ ಸಂಪತ್ತನ್ನು ಕಾಪಾಡಲು ಅವರು ಪ್ರೇರಣೆ ಎಂದು, ಉತ್ತರಕನ್ನಡ ಜಿಲ್ಲಾಧಿಕಾರಿ ಕೆ. ಲಕ್ಷ್ಮೀಪ್ರಿಯಾ ಹೇಳಿದ್ದಾರೆ. ರಾಯಚೂರಿನ, ಮಹರ್ಷಿ ಶ್ರೀ ವಾಲ್ಮೀಕಿ ಜಯಂತಿ ಪ್ರಯುಕ್ತ, ಸರ್ಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯದ ಬಳಿ, ಮಹರ್ಷಿ ಶ್ರೀ ವಾಲ್ಮೀಕಿ ಪುತ್ಥಳಿಗೆ, ಸಂಸದ ಜಿ.ಕುಮಾರ್ ನಾಯಕ, ಶಾಸಕ ಶಿವರಾಜ ಪಾಟೀಲ, ಮಾಲಾರ್ಪಣೆ ಮಾಡಿದರು.

ಬಳ್ಳಾರಿಯಲ್ಲಿ ಆಯೋಜಿಸಿದ್ದ, ಮಹರ್ಷಿ ವಾಲ್ಮೀಕಿ ಜಯಂತಿಯಲ್ಲಿ ಪಾಲ್ಗೊಂಡ, ಶಾಸಕ ನಾರಾ ಭರತ್ ರೆಡ್ಡಿ ಹಾಗೂ ಬಿ.ನಾಗೇಂದ್ರ ಅವರು, ಪುತ್ಥಳಿಗೆ ಪು ್ಪ ನಮನ ಸಲ್ಲಿಸಿದರು. ಮನುಕುಲಕ್ಕೆ ನಿಜವಾದ ಸಮಾಜಶಾಸ್ತ್ರ ತಿಳಿಸಿ, ರಾಮಾಯಣ ಕಾವ್ಯ ರಚಿಸಿದ ಮಹರ್ಷಿ ವಾಲ್ಮೀಕಿ, ರಾಮಾಯಣದ ಮಹಾ ಕೋಗಿಲೆ ಎಂದು, ವಿಧಾನ ಪರಿ ‘ತ್ ಸದಸ್ಯ ಪಿ.ಎಚ್.ಪೂಜಾರ, ಬಾಗಲಕೋಟೆಯ ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಗೌರವಾರ್ಪಿಸಿ, ಮಾತನಾಡಿದರು. ಕೊಪ್ಪಳ ನಗರದ ಸಾಹಿತ್ಯ ಭವನದಲ್ಲಿ, ಮಹರ್ಷಿ ವಾಲ್ಮೀಕಿ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ, ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ತಂಗಡಗಿ ಪಾಲ್ಗೊಂಡು, ಪುಷ್ಪ ನಮನ ಸಲ್ಲಿಸಿದರು.

<><><>

ಕಿತ್ತೂರು ಕರ್ನಾಟಕ ಹಾಗೂ ಕಲ್ಯಾಣ ಕರ್ನಾಟಕ ಭಾಗದ, ಗ್ರಾಮೀಣ ಭಾಗಗಳಲ್ಲಿ ಶೀಗಿ ಹುಣ್ಣಿಮೆ ಆಚರಣೆಗೆ ವಿಶೇಷ ಮಹತ್ವವಿದೆ. ಫಸಲನ್ನು ಹೊತ್ತು ನಿಂತ, ಭೂಮಿ ತಾಯಿಯ ಸೀಮಂತವೆ ಶೀಗಿ ಹುಣ್ಣಿಮೆ. ನಾಡಿನಾದ್ಯಂತ ರೈತಾಪಿ ವರ್ಗಕ್ಕೆ ನಿನ್ನೆ ನಿಜಾರ್ಥದಲ್ಲಿ ಹಬ್ಬದ ಸಂಭ್ರಮ. ಬಗೆ ಬಗೆಯ ಖಾದ್ಯಗಳಾದ, ಪುಂಡಿ ಪಲ್ಯ, ಕುಚ್ಚಿದ ಕಡಬು, ರುಬ್ಬಿದ ಖಾರ, ಹುರಕ್ಕಿ ಹೋಳಿಗೆ ಹಾಗೂ ಕಟ್ಟಿನ ಸಾರು, ಭೂಮಿ ತಾಯಿಗೆ ಚರಗ ಚೆಲ್ಲಿ, ನೈವೇದ್ಯ ಹಿಡಿಯಲು, ಬಂಧು–ಬಾಂಧವರಿಗೆ ಹಬ್ಬದೂಟ ಉಣಬಡಿಸಲು ಪ್ರಮುಖವಾಗಿ ಸಿದ್ಧಗೊಂಡಿದ್ದವು.

<><><>

ಬೆಂಗಳೂರಿನ ಪೀಣ್ಯ ಬಳಿ, ದಾಸರಹಳ್ಳಿಯ ಮಾಗಡಿ ರಸ್ತೆ ನಿವಾಸಿ, ಕಟ್ಟಡ ಕಾರ್ಮಿಕ 57 ವರ್ಷದ, ಕುಮರೇಶ ಆಯತಪ್ಪಿ ಬಿದ್ದು, ಮೆದುಳು ನಿಷ್ಕ್ರಿಯಗೊಂಡ ಹಿನ್ನೆಲೆ, ಅವರ ಪತ್ನಿ ಸೆಲ್ವಿ ಅಂಗಾಂಗ ದಾನಕ್ಕೆ ಸಮ್ಮತಿಸಿದ್ದು, ಮಾದರಿ ಎಂದು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆ ಸಚಿವ ದಿನೇಶ ಗುಂಡೂರಾವ್ ಶ್ಲಾಘಿಸಿದ್ದಾರೆ. ಮೃತರ ಕುಟುಂಬಸ್ಥರು, ಹತ್ತಾರು ಜನರ ಜೀವ ಉಳಿಸಲು ಮುಂದೆ ಬಂದಿರುವುದು, ಸಮಾಜಕ್ಕೆ ಮಾದರಿ ನಡೆ. ದುಃಖದ ಸಮಯದಲ್ಲಿಯೂ ಇಂತಹ ಮಾನವೀಯ ನಿರ್ಧಾರ ತೆಗೆದುಕೊಂಡ ಕುಟುಂಬ ಸದಸ್ಯರಿಗೆ, ಅಭಿನಂದನೆ. ಅಂಗಾಂಗ ದಾನದ ಬಗ್ಗೆ ಜಾಗೃತಿ ಮೂಡಿಸೋಣ. ಅಂಗಾಂಗ ದಾನದ ಪ್ರತಿಜ್ಞೆ ಮಾಡೋಣ ಎಂದು, ಸಾಮಾಜಿಕ ಮಾಧ್ಯಮ ಎಕ್ಸ್ ಮೂಲಕ ಸಚಿವರು ಕೋರಿದ್ದಾರೆ.

<><><>

ದಾವಣಗೆರೆ ಜಿಲ್ಲೆಯಾದ್ಯಂತ ವ್ಯಾಪಕ ಮಳೆ ಮುಂದುವರಿದಿದೆ. ಜನಜೀವನ ಬಾಧಿತವಾಗಿದೆ. ಮಹಾನಗರ ಪಾಲಿಕೆ ವ್ಯಾಪ್ತಿಯ ತಗ್ಗು ಪ್ರದೇಶದ ಹಲವು ಬಡಾವಣೆಗಳಲ್ಲಿ, ನೂರಕ್ಕೂ ಹೆಚ್ಚು ಮನೆಗಳಿಗೆ ನೀರು ನುಗ್ಗಿದೆ. ಸಂಸದರಾದ ಪ್ರಭಾ ಮಲ್ಲಿಕಾರ್ಜುನ, ತುರ್ತು ಪರಿಸ್ಥಿತಿ ನಿಭಾಯಿಸಲು, ಸೂಕ್ತ ಕ್ರಮ ಕೈಗೊಳ್ಳುವಂತೆ, ಜಿಲ್ಲಾಡಳಿತದ ಅಧಿಕಾರಿಗಳಿಗೆ, ನಿರ್ದೇಶನ ನೀಡಿದ್ದಾರೆ.

<><><>

ಹಾವೇರಿಯಲ್ಲಿ ಧಾರಾಕಾರ ಮಳೆ ಮುಂದುವರಿದಿದ್ದು, ಅಪಾರ ಪ್ರಮಾಣದ ಬೆಳೆ ಹಾನಿಯಾಗಿದೆ. ತುಂಗಭದ್ರಾ, ವರದಾ, ಕುಮದ್ವತಿ ನದಿಗಳು ಅಪಾಯ ಮಟ್ಟದಲ್ಲಿ ಹರಿಯುತ್ತಿವೆ. ರಾಜ್ಯ ಸರ್ಕಾರ ರೈತರಿಗೆ ಕೂಡಲೇ ಬೆಳೆ ಹಾನಿ ಪರಿಹಾರ ನೀಡಬೇಕೆಂದು, ಹಾವೇರಿ ಸಂಸದ ಬಸವರಾಜ ಬೊಮ್ಮಾಯಿ ಆಗ್ರಹಿಸಿದ್ದಾರೆ.

<><><>

ಹಾವೇರಿ ಜಿಲ್ಲೆಯಲ್ಲಿ ಮಳೆಯಿಂದಾದ ಹಾನಿಗೆ, ತಕ್ಷಣ ಪರಿಹಾರ ಕ್ರಮಕೈಗೊಳ್ಳುವಂತೆ, ಜಿಲ್ಲಾ ಉಸ್ತುವಾರಿ ಸಚಿವ ಶಿವಾನಂದ ಪಾಟೀಲ ಜಿಲ್ಲಾಧಿಕಾರಿಗೆ ಸೂಚಿಸಿದ್ದಾರೆ. ಚರಂಡಿಯಲ್ಲಿ ಬಿದ್ದು ಮೃತ ಪಟ್ಟ ಬಾಲಕ ನಿವೇದನ್ ಸಾವಿಗೆ, ತೀವ್ರ ಸಂತಾಪ ವ್ಯಕ್ತಪಡಿಸಿರುವ ಸಚಿವರು, ಪರಿಹಾರ ವಿತರಿಸಲಾಗುವುದು ಎಂದರು.

<><><>

ಮಂಡ್ಯದಲ್ಲಿ ಬರುವ ಡಿಸೆಂಬರ್ ನಲ್ಲಿ ಆಯೋಜಿತ, ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ, ಸರ್ವಾಧ್ಯಕ್ಷರ ಆಯ್ಕೆ, ಕನ್ನಡ ಸಾಹಿತ್ಯ ಪರಿಷತ್ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಚರ್ಚೆ ಬಳಿಕ, ಸರ್ವಾನುಮತದಿಂದ ನಡೆಯಲಿದೆ ಎಂದು, ಕನ್ನಡ ಸಾಹಿತ್ಯ ಪರಿ ‘ತ್ತಿನ ರಾಜ್ಯಾಧ್ಯಕ್ಷ ಮಹೇಶ ಜೋಶಿ ತಿಳಿಸಿದ್ದಾರೆ. ಮಂಡ್ಯದಲ್ಲಿ ಅವರು ಸುದ್ದಿಗೋಷ್ಠಿ ನಡೆಸಿದರು. ಸಮ್ಮೇಳನಕ್ಕಾಗಿ 28 ಸಮಿತಿಗಳನ್ನು ರಚಿಸಿದ್ದು, ಎಲ್ಲ ಸಮಿತಿಗಳಿಂದ ಕ್ರಿಯಾತ್ಮಕವಾಗಿ ಹಾಗೂ ವ್ಯವಸ್ಥಿತವಾಗಿ ಕಾರ್ಯ ಚಟುವಟಿಕೆಗಳು ನಡೆಯುತ್ತಿವೆ, ಎಂದರು.

<><><>

87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ, ಕನ್ನಡ ಜ್ಯೋತಿ ರಥ ಯಾತ್ರೆ, ರಾಯಚೂರು ತಲುಪಿದ್ದು, ಸಂಸದ ಜಿ.ಕುಮಾರ್ ನಾಯಕ, ವಿವಿಧ ಕಲಾ ತಂಡಗಳೊಂದಿಗೆ ಸ್ವಾಗತಿಸಿದರು.

<><><>

ಖ್ಯಾತ ವಿಮರ್ಶಕ, ಕೀರ್ತಿಶೇಷ, ಧಾರವಾಡದ ಡಾಕ್ಟರ್ ಜಿ.ಎಸ್ ಆಮೂರ ಅವರ ಜನ್ಮಶತಮಾನೋತ್ಸವ ಹಿನ್ನೆಲೆ, ಧಾರವಾಡದಲ್ಲಿ ನಾಡಿದ್ದು, 20ನೇ ತಾರೀಖು, ವಿಶೇಷ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು, ಸಮಿತಿಯ ಕಾರ್ಯದರ್ಶಿ ಪ್ರೊಫೆಸರ್ ರಾಘವೇಂದ್ರ ಪಾಟೀಲ ತಿಳಿಸಿದ್ದಾರೆ. ಧಾರವಾಡದಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ಆಲೂರು ವೆಂಕಟರಾವ ಸಾಂಸ್ಕೃತಿಕ ಭವನದಲ್ಲಿ, ಬೆಳಗ್ಗೆ 10 ಗಂಟೆಗೆ ಕಾರ್ಯಕ್ರಮ ಆರಂಭವಾಗಲಿದೆ. ಎಚ್.ಎಸ್ ರಾಘವೇಂದ್ರರಾವ ಉದ್ಘಾಟಿಸಲಿದ್ದು, ಪ್ರೊಫೆಸರ್ ಮಲ್ಲಿಕಾರ್ಜುನ ಹಿರೇಮಠ ಪಾಲ್ಗೊಂಡು, ಡಾಕ್ಟರ್ ಜಿ.ಎಂ ಹೆಗಡೆ ಸಂಪಾದಕತ್ವದ, 'ಒಳಗಿರುವ ಬೆಳಕು' ಪುಸ್ತಕವನ್ನು, ಡಾಕ್ಟರ್ ರಮಾಕಾಂತ ಜೋಶಿ ಬಿಡುಗಡೆಗೊಳಿಸುವರು ಎಂದರು.

<><><>

ಉಪ ಲೋಕಾಯುಕ್ತ, ನ್ಯಾಯಮೂರ್ತಿ ಬಿ. ವೀರಪ್ಪ ಅವರು, ಇಂದಿನಿಂದ ಮೂರು ದಿನ, ತುಮಕೂರು ಜಿಲ್ಲೆಗೆ ಭೇಟಿ ನೀಡಿ, ವಿವಿಧ ಇಲಾಖೆಗಳ ಪ್ರಕರಣಗಳನ್ನು ಪರಿಶೀಲಿಸಲಿದ್ದಾರೆ ಎಂದು, ಜಿಲ್ಲಾಧಿಕಾರಿ ಸುಭಾ ಕಲ್ಯಾಣ್ ತಿಳಿಸಿದ್ದಾರೆ.

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

- ರಾಜ್ಯದ ಮೂರು ವಿಧಾನಸಭಾ ಕ್ಷೇತ್ರಗಳಿಗೆ ಉಪ ಚುನಾವಣೆ; ವಿವಿಧ ಪಕ್ಷಗಳಿಂದ ಸೂಕ್ತ ಅಭ್ಯರ್ಥಿ ಆಯ್ಕೆಗೆ, ಚಿಂತನ-ಮಂಥನ.
- ರಾಯಚೂರು ವಿಶ್ವವಿದ್ಯಾಲಯ ಹಾಗೂ ಪರಿಶಿ ್ಟ ವರ್ಗದ ವಸತಿ ಶಾಲೆಗಳಿಗೆ ಮಹರ್ಷಿ ವಾಲ್ಮೀಕಿ ನಾಮಾಂಕಿತ - ಮುಖ್ಯಮಂತ್ರಿ ಸಿದ್ದರಾಮಯ್ಯ.
- ಅಂಗಾಂಗ ದಾನದ ಬಗ್ಗೆ ಪ್ರತಿಜ್ಞೆ ಹಾಗೂ ಜನ ಜಾಗೃತಿ ಮೂಡಲಿ - ದಿನೇಶ ಗುಂಡೂರಾವ್, ಆಶಯ.
- ಶೀಗಿ ಹುಣ್ಣಿಮೆ; ಭೂಮಿ ತಾಯಿಗೆ ಸೀಮಂತ ನೆರವೇರಿಸಿದ, ರೈತಾಪಿ ವರ್ಗ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>